ಕ್ಯಾನ್ಸಲ್ ಮಾಡಲು ಮನವಿ ಮಾಡಿಕೊಳ್ಳುತ್ತೇವೆ ಎಂದು. ಆದರೆ ತಾವು ಅದನ್ನು ಇಲ್ಲಿ ಮಾಡುತ್ತಿಲ್ಲ. ಅದಂ ಬಿಟ್ಟು ತಾವು ಏನೇನೋ ಹೇಳುವುದಕ್ಕೆ ಹೊರಟರೆ ಹೇಗೆ ?

ಶ್ರೀ ಎಂ. ಶಿವಣ್ಣ.—ಅದಕ್ಕೆ ಸ್ವಲ್ಪ ಟೈಮ್ ಕೊಡಿ.

ಅಧ್ಯಕ್ಷರು.—ತಾವು ಮಾತನಾಡುತ್ತಾ ಪ್ರಜಾಪ್ರಭುತ್ವದಲ್ಲಿ ನಮ್ಮನ್ನು ತಿಳಿಯಪತ್ತಿದ್ದಾರೆ, ಅದು ಮಾಡುತ್ತಿದ್ದಾರೆ, ಇದು ಮಾಡುತ್ತಿದ್ದಾರೆ ಎಂದು ಹೇಳಿದರೆ ಹೇಗೆ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ವಿರೋಧಪಕ್ಷದ ನಾಯಕರನ್ನು ಸಸ್‌ಪೆನ್‌ಷನ್ ಮಾಡಿದರೆ ಹೇಗೆ ?

ಅಧ್ಯಕ್ಷರು.—ನೀವು ಸರ್ಕಾರಕ್ಕೆ ಮನವಿ ಸಲ್ಲಿಸುವುದನ್ನು ಬಿಟ್ಟು ಬೇರೆ ಏನೋ ಹೇಳುವುದಕ್ಕೆ ಹೊರಟರೆ ಹೇಗೆ ? ನೀವು ನೇರವಾಗಿ ಸರ್ಕಾರಕ್ಕೆ ತಮ್ಮ ರಿಕ್ವೆಸ್ಟ್‌ನ್ನು ಸಲ್ಲಿಸಿ.

ಶ್ರೀ ಎಸ್. ಬಂಗಾರಪ್ಪ.—ನಾವು ನಿಮ್ಮನ್ನು ರಿಕ್ವೆಸ್ಟ್ ಮಾಡುತ್ತೇವೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಗೊತ್ತಿದೆ. ಮಾನ್ಯ ಮಂತ್ರಿಗಳು ಬಂತ್ತು.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ನಾನಂ ಅಪ್ಪಣೆ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮನ್ನು ಬೇರೆ ಬೇರೆ ರೀತಿಯಿಂದ ಇಂಟರ್‌ಪ್ರಿಟೇಶನ್ ಮಾಡಿ ಡಿಸ್‌ಕಷನ್ ಮಾಡದಂತೆ ಮಾಡುತ್ತಿದ್ದಾರೆ. ಇಂತಹ ನೀತಿಯ ವಿರುದ್ಧ ನಾವು ಪ್ರತಿಭಟನೆ ಮಾಡಿ ಎಲ್ಲಿಯವರೆಗೆ ಮೇಲ್ಮನೆಯ ವಿರೋಧಪಕ್ಷದ ನಾಯಕರನ್ನು ಮತ್ತು ಇತರೆ ಸದಸ್ಯರ ಸಸ್‌ಪೆನ್‌ಷನ್‌ನ್ನು ಕ್ಯಾನ್ಸಲ್ ಮಾಡುವುದಿಲ್ಲವೋ ಅಲ್ಲಿಯವರೆಗೆ ನಾವು ಈ ಸದನವನ್ನು ಬಹಿಷ್ಕಾರ ಮಾಡಿ ಹೊರಗೆ ಹೋಗುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇದು ಅವರ ಸಂಸ್ಕೃತಿ ನಿಮ್ಮನ್ನು ನಾನು ಅಭಿನಂದಿಸುತ್ತೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ.....

ಶ್ರೀ ಎಂ. ಎಸ್. ಕೃಷ್ಣನ್. – ಮಾನ್ಯ ಅಧ್ಯಕ್ಷರೇ ನನಗೊಂದು ನಿಮಿಷ ಅವಕಾಶ ಕೊಡಿ.

ಪ್ರೊ॥ ಎ. ಲಕ್ಷ್ಮೀಸಾಗರ್.- ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ಉಪನಾಯಂಕರು ತಮ್ಮ ಕಛೇರಿಯಲ್ಲಿ ಭೇಟಿ ಮಾಡಿ ತಮ್ಮ ಅಹವಾಲನ್ನು ತಮ್ಮ ವಂಖಾಂತರ ಸರ್ಕಾರಕ್ಕೆ ತಿಳಿಸಬೇಕೆಂದು ಮನವಿ ಸಲ್ಲಿಸಿ ತಮ್ಮ ಮನಸ್ಸಿನ ಒಳಹೊಕ್ಕಿದಾಗ ತಾವು ಉದಾರವಾಗಿ ಅವರಿಗೆ ಪ್ರಶ್ನೋತ್ತರ ಸಮಯವಾದರೂ, ನಿಯಮಾಳಿಗಳನ್ನು ಸ್ವಲ್ಪ ಕಾಲದವರಿಗೆ ವಂಂದಕ್ಕೆ ಹಾಕಿ ಅವರಿಗೆ ಅವರ ಅಭಿಪ್ರಾಯವನ್ನು ತಿಳಿಸಲು ಅನುಮತಿ ಕೊಟ್ಟಿರಿ.

ಅವರು ತಮ್ಮಲ್ಲಿ ಮನವಿ ಸಲ್ಲಿಸಿದ್ದ ಪ್ರಕಾರವೇ ಸರ್ಕಾರಕ್ಕೂ ಮನವಿಯನ್ನು ಸಲ್ಲಿಸುತ್ತಾರೆ ಎನ್ನುತಕ್ಕ ಭಾವನೆಯಿಂದ ತಾವು ಇದ್ದಿರಿ. ಆದರೆ ಸನ್ಮಾನ್ಯ ವಿರೋಧಪಕ್ಷದ ಉಪನಾಯಕರು ಸರ್ಕಾರವನ್ನು ಟೀಕೆ ಮಾಡತಕ್ಕಂಥಾದ್ದು, ಸರ್ಕಾರವನ್ನು ಬಯ್ಯುಳ ಶಬ್ದಗಳಿಂದ ಟೀಕೆ ಮಾಡತಕ್ಕ ಪ್ರಯತ್ನವನ್ನು ಮಾಡಿದರು. ಇವರಲ್ಲಿ ಕೆಲವಾರು ಅಂಶಗಳು ಸೇರಿಕೊಂಡಿವೆ ಅವ್ಯಗಳಲ್ಲಿ ಮೊದಲನೆಯದಾಗಿ, ಈ ಸಭೆಗೆ ಮತ್ತು ವಿಧಾನ ಪರಿಷತ್ತಿಗೆ ಸಭಾಕಲಾಪಗಳು ಹೇಗೆ ನಡೆಯಬೇಕು ಎಂಬುದರ ಬಗ್ಗೆ ನಾವುಗಳು ಬೇರೆ ಬೇರೆ ನಿಯಮಾವಳಿಗಳನ್ನು ಮಾಡಿದ್ದೇವೆ. ಸಂವಿಧಾನದ ಪ್ರಕಾರ ಬೇರೆ ಬೇರೆ ಆರ್ಟಿಕಲ್‌ಗಳ ಮೇಲೆ ಆ ಮನೆಯಲ್ಲಿ ಸಭೆ ಹೇಗೆ ನಡೆಯಂಬೇಕು ಎನ್ನುವುದಕ್ಕೆ ಅಲ್ಲಿನ ನಿಯಮಾವಳಿಗಳೇ ಬೇರೆ ಇವೆ. ಈ ಮನೆಯಲ್ಲಿ ಸಭೆ ಹೇಗೆ ನಡೆಯಬೇಕೆಂಬ ಬಗ್ಗೆ ಇಲ್ಲೇ ಬೇರೆ ನಿಯಮಾವಳಿಗಳು ಇವೆ. ಪ್ರತಿಯೊಂದು ಮಹಾ ಸಭೆಗೆ ಸಂವಿಧಾನದಲ್ಲಿ ಆಯಾಯಾ ಸಭೆಗೆ ಸೀಮಿತವಾದಂಥ ಮತ್ತು ಪ್ರತ್ಯೇಕವಾದಂಥ ಅಧಿಕಾರಿಗಳನ್ನು ಕೊಟ್ಟಿದ್ದಾರೆ ಈ ಮನೆಗಳ ನಿಯಮಾವಳಿಗಳ ಪ್ರಕಾರ ವಿಧಾನಪರಿಷತ್ತಿನಲ್ಲಿ ಏನೇನು ನಡೆಯುತ್ತದೆಯೋ ಅವುಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ರೂಲ್ ೫೨೭ ಪ್ರಕಾರ ಈ ಮನೆಯಲ್ಲಿ ಮೇಲ್ಮನೆಯಲ್ಲಿ ನಡೆದಿರಂವ ವಿಷಯಂಗಳ ಬಗ್ಗೆ ಚರ್ಚೆ ಮಾಡುವಂತಿಲ್ಲ.